Trans perting Cement Outside the State.

ಶ್ರೀ ಬಿ. ಎಂ. ಮಂಜುನಾಥ್ (ತಿಪಟೂರು) —ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟು ೧೦ ದಿವಸಗಳಾದವು. ನಮ್ಮ ದೇಶದಲ್ಲಿರು ಸಿಮೆಂಟ್ ಹೊರಗಡೆ ಪ್ರಾಂತಕ್ಕೆ ಹೋಗುತ್ತದೆ. ಅದನ್ನು ತಡೆಗಟ್ಟುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಿರಾ ಎಂದು ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಅದುಇನ್ನೂ ಬಂದಿಲ್ಲ ಸಿಮೆಂಟ್ ಅಭಾವದಿಂದ ಮಾರ್ಚ್ ತಿಂಗಳಲ್ಲಿ ಡೆವಲಪ್‌ಮೆಂಟ್‌ವರ್ಕ್ಸ್ ನಿಂತು ಹೋಗಿದೆ.

(Matter Under Rule 312 No. Dela in issae of Ration Cards.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) — ನಾನು ಒಂದು ನೋಟಿಸನ್ನು ರೂಲ್ ೩೧೨ರ ಪ್ರಕಾರ ಕಳುಹಿಸಿದ್ದೆ. ಬೆಂಗಳೂರು ನಗರದಲ್ಲಿ ರೇಷನ್ ಕಾರ್ಡ್ ಕೊಡುವ ಬಗ್ಗೆ ತೀರಾ ತೊಂದರೆಗೆ ಮತ್ತು ಕಷ್ಟಕ್ಕೆ ಬಂದಿದೆ. ರೇಷನ್ ಕಾರ್ಡನ್ನು ಆಪ್ಲೈ ಮಾಡಿದ ಜನಗಳಿಗೆ ರೇಷನ್ ಕಾರ್ಡ್ ಕೊಡುತ್ತಾ ಇಲ್ಲ. ರೂಲ್ ಪ್ರಕಾರ ಜನವರಿ ೩೧ರ ಒಳಗೆ ಅರ್ಜಿ ಹಾಕಿಕೊಂಡವರಿಗೆ ಜನವರಿ ೩೧ ನೇ ತಾರೀಖಿನ ಒಳಗೆ ಕೊಡಬೇಕು ಎಂದು ಇದೆ. ಜನವರಿ ೩೧ ಕಳೆದು ಹೋಯಿತು. ರೇಷನ್ ಕಾರ್ಡ್ ಸಿಕ್ಕಲಿಲ್ಲ. ಕೇಳಿದರೆ ಈಗ ಬಾ ನಾಳೆ ಬಾ, ನಾಡಿದ್ದು ಬಾ ಎಂದು ಹೇಳುತ್ತಾರೆ. ಪತ್ರಗಳ ಮೇಲೆ ಪತ್ರಗಳು ಬರೆದಿದ್ದಾರೆ. ಶ್ರೀ ಡಿ ನಾರಾಯಣ ರಾವ್ ಎಂಬುವರು ಪತ್ರ ಬರೆದು ಕಳುಹಿಸಿದ್ದಾರೆ. ನಾನು ೩೨ ಬಾರಿ ಆಫೀಸಿಗೆ ಹೋಗಿದ್ದೇನೆ ರೇಷನ್ ಕಾರ್ಡ್ ಕೊಡಲಿಲ್ಲ, ೨೧-೨೨ ದಿನ ರಜ ತೆಗೆದುಕೊಂಡು ಮಾರ್ಚಿ ಕೊನೆಗೆ ಬಾ ಎಂದ ಬೆಂಗಳೂರು ನಾರ್ತ್ ಏರಿಯಾ ರೇಂಜ್ ಆಫೀಸಿರು ಕಾಗದ ಬರೆದಿದ್ದಾರೆ ಎಂದು ಹೇಳುತ್ತಾರೆ. ರೇಷನ್ ಕಾರ್ಡ್ ಕೊಡುವುದಕ್ಕೆ ಮೂರು ತಿಂಗಳಿನಿಂದ ಸತಾಯಿಸುತ್ತಾ ಇದ್ದಾರೆಂದು. ಸಾಮಿರಾರು ಜನಕ್ಕೆರೇಷನ್ ಕಾರ್ಡ್ ಸಿಕ್ಕುತ್ತಾ ಇಲ್ಲ. ಗಲಾಟೆ ನಡೆಯುತ್ತಾ ಇದೆ. ಮಾರಾಮಾರಿ ನಡೆಯುತ್ತಾ ಇದೆ. ಅಧಿಕಾರಿಗಳು ಸ್ವೇಚ್ಛಾರಿತಿಯಿಂದ ವರ್ತಿಸಿ ಮಾಡುತ್ತಾರೆ. ನಮ್ಮ ಏರಿಯಾ ರೇಂಜ್ ಆಫೀಸಿನಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ಸಂತೋಷ.

Statement of the Minister of state for Animal Husbandry and Veterinary regoding deay in Issue of Ration Cards.

SRI N. CHIKKE GOWDA (Minister of State for Animal Husbandry).- Madam Speaker, over three lakhs of Ration Cards Were Submitted for renewal in all the three Ranges in Bangalore City during the month of January 1973. The renewal of ertion cards in raspect of the existing card Holders has been giveh top priority and this job has been almost Complete as par table below :

S.N.	Name of Range	No. of Ration cards for renewal	No. of cards whose reneval if completed	Balance ...	No. of Applications for new cards	No. of new cards issued
1	2	3	4	5	6	7
1.	East Range	80,934	80,934	nil	2,977	881
2.	South Range	109,691	109,691	nil	5,579	1,950
3.	North Range	126,514	123,000	3,514	5,676	374

2. The existing Card Holders have by and large received fresh cards after surrendering the cards held by them earlier.

(Sri N. Chikke Gowda)

3. Simultaneously with the renewal of old cards, a large number of persons have given applications for new Ration Cards. A review of these applications has disclosed that the dependents of some of the existing Card Holders have given applications for fresh Cards to be issued in their names althtugh sueh dependents are etumerated against the exiising Ration Cards. In view of the likelihood of a large number of dependents submitting applications for the issue of independent cards while concurrently continuing as dependents on existing cards, proger verification of these requests has been found to be absolteuly necessary.

4. The work pertasning to the verification of new applications is in progres and this work is expected to be completed before the end of April 1973.

5. There are nearly 5,676 applications in the North Range, Malleswaram for issue of new Cards. As there are Just six food Inspectorr for attending to the verification of such cards in addition to their existrng dutles, verification of the new applications has been delayed, but every effort is being made to complete to the work before the end of April 1973.

As regards the behaviovour of the staff in the North Range Office. the staff has been repeatedly asked to be courteous to the public. Instances of spicsfic misbehaviour on the part of the staff if brought to the notice of Government, Government will not hesitate to take action on them.

Sri M. S. Krishnan.—The concerned officers in this North Range and this complaint I have also heard in Chamarajapet, that these renewal application for ration cards they are being kept either in their Houses of some officers in their shelves and they say they have not received them at all. This has happened in my case which I cited about my sister. Afterwards, that clerk went to the House of the Officer and brought back the papers. This is what is happening.

Sri N. Chikke Gowda.—If any specific charge is brought bifore the Govt. wewill certainly look into this matter. In the case of north range officer, he was transferred and another officer has been put in charge and he is looking after this work. As I have a lready said, in the north and south ranges, we have got fresh cards 1980 have been issued. The remaining they have to be verified.

There are many complaints After verification they have been found to be bogus,and my many bogus card holders are coming forward and we have to vesify these cards.

Regarding officers not being courteous, I have already said that we have told the officers that they should behave properly and it specific cases of misbehaviour are brought to notice, we will certainly look into the matter and take disciplinary action.

ಶ್ರೀ ವಾಟಾಳ್ ನಾಗರಾಜ್.—ರೇಷನ್ ಕಾರ್ಡುಗಳು ಸಿಗಲಿಲ್ಲ ಎಂದು ಎ. ಎಲ್. ಎ. ಗಳೇ ಪತ್ರ ಬರೆದುಕೊಡಬೇಕೆಂದು ರೇಂಜು ಆಫೀಸರುಗಳು ಹೇಳುತ್ತಿದ್ದಾರೆಂದು ಕೇಳುತ್ತೇವೆ. ಇದರ ಬದಲು ನಾನು ಸರಕಾರಕ್ಕೆ ಸಲಹೆ ಮಾಡುವುದು ಯಾವ ರೇಂಜ್ ಆಫೀಸುಗಳಲ್ಲಿ ಕಾರ್ಡುಗಳನ್ನು ಪೂರ್ತಿ ಹಂಚಲಾಗಲಿಲ್ಲವೊ ಅಲ್ಲಿ ಟೆಂಪರರಿಯಾಗಿ ನಾಲ್ಕೈದು ಬೇರೆ ಡಿವಿಜನ್‌ಗಳ ತರಹ ಆಫೀಸುಗಳನ್ನು ಮಾಡಿ ರೇಷನ್ ಕಾರ್ಡುಗಳನ್ನು ಕ್ರಮ ಬದ್ಧವಾಗಿ ಹಂಚುವ ವ್ಯವಸ್ಥೆ ಮಾಡುವುದು ಒಳ್ಳೆಯದಲ್ಲವೇ ? ಜನವರಿ ೩೧ ರೊಳಗೇ ಕಾರ್ಡುಗಳಿಗೆ ಅರ್ಜಿಗಳನ್ನು ಕೊಡಬೇಕೆಂದು ಇದೆ. ಅದರಂತೆ ಅರ್ಜಿ ಕೊಟ್ಟಿದ್ದರೂ ಇದುವರೆಗೆ ಕಾರ್ಡುಗಳು ಕೆಲವರಿಗೆ ಸಿಕ್ಕಿಲ್ಲ. ಇದೂ ಅಲ್ಲದೆ ಕಾಪೋರೇಷನ್‌ಗೆ ೩೫ ಹಳ್ಳಿಗಳೂ ಸೇರಿವೆ. ಇಂತಹ ಜಾಗಗಳಲ್ಲಿ ಸಣ್ಣದಾದ ಒಂದು ಫುಡ್ ಆಫೀಸು ಮಾಡಿ ಅದರ ಮೂಲಕ ರೇಷನ್ ಕಾರ್ಡುಗಳನ್ನೇಕೆ ಹಂಚಬಾರದು. ಮಾನ್ಯ ಮಂತ್ರಿಗಳು ಹೇಳಿರುವಂತೆ ೫೬೭೬ ಅರ್ಜಿದಾರರುಗಳಿಗೆ ಕಾರ್ಡನ್ನು ಹಂಚಬೇಕಾಗಿತ್ತು. ಇದರಲ್ಲಿ ೩೭೪ ಮಾತ್ರ ಹೊಸ ಕಾರ್ಡು ಕೊಡಲಾಗಿದೆ ಎಂದು ಇದೆ. ಇದನ್ನು ಆದಷ್ಟು ತೀವ್ರವಾಗಿ ಮಾಡಿಸಿ ಹಂಚಲು ಸರಕಾರ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎನ್ ಚೆಕ್ಕೆಗೌಡ.—ಆದಷ್ಟು ಜಾಗ್ರತೆ ಮಾಡೋಣ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ಅಭಾವದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸು ತಮ್ಮ ಮೂಲಕ ಕಳುಹಿಸಿದ್ದೆ. ಇದರಿಂದ ಇಲ್ಲಿ ಬೆಲೆಗಳೂ ದಿನೇ ದಿನೇ ಏರುತ್ತಿವೆ. ಇದರ ಬಗ್ಗೆ ಆಹಾರ ಮಂತ್ರಿಗಳು ಒಂದು ಹೇಳಿಕೆ ಕೊಡುವುದಾಗಿ ತಿಳಿಸಿದ್ದರು. ಇದು ಯಾವಾಗ ಬರುತ್ತದೆ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಆಹಾರ ಖಾತೆ ಮಂತ್ರಿಗಳು ಇಲ್ಲಿಗೆ ಬರಲಿ.

Enquiry in the Ranebennur Murder case.

ಶ್ರೀ ಹೆಚ್. ಡಿ. ದೇವೇಗೌಡ.—ಮೊನ್ನೆ ದಿವಸ ಇಲ್ಲಿ ರಾಣೆಬೆನ್ನೂರಿನ ಕೊಲೆ ಬಗ್ಗೆ ಹೇಳಿದಾಗ ಇದರ ಬಗ್ಗೆ ಮಾನ್ಯ ಲೋಕೋಪಯೋಗಿ ಖಾತೆ ಮಂತ್ರಿಗಳು ಉತ್ತರ ಕೊಡುತ್ತಾ, ಇದರ ಬಗ್ಗೆ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ತಿಳಿಸಿದ್ದರು. ನನಗೆ ಇಂದು ಬೆಳಿಗ್ಗೆ ಟ್ರಂಕ್ ಕಾಲ್‌ನಲ್ಲಿ ಹೊತನಾಡುವಾಗ ಅಲ್ಲಿನ ಜನರೇ ಒಬ್ಬರು ತಹಶೀಲುದಾರರನ್ನು ಇಲ್ಲಿನ ಎನ್‌ಕ್ವೈರಿ ಮಾಡಿಸಲು ನೇಮಿಸುತ್ತಿದ್ದಾರೆನ್ನುವ ವಿಚಾರ ಬಂತು. ಇದನ್ನು ಮಾನ್ಯ ಮುಖ್ಯ ಮಂತ್ರಿಗಳಿಂದ ಸರಿಯಾಗಿ ತಿಳಿಯಲು ಇಲ್ಲಿ ಈಗ ಇದನ್ನು ಅವರ ಗಮನಕ್ಕೆ ತರಬೇಕಾಗಿದೆ. ತಹಶೀಲುದಾರರು ಎನ್‌ಕ್ವೈರಿಮಾಡಿದರೆ ಅದು ಮ್ಯಾಜಿಸ್ಟೀರಿಯಲ್ ವಿಚಾರಣೆಯಾಗುವುದಿಲ್ಲ ಎಂದು ಹೇಳುತ್ತೇನೆ.

SRI D. DEVARAJ URS.—I am asking the Deputy Commissioner himself to take up the matter.

Suicide by one Bhima in Bhalki.

ಶ್ರೀ ಹೆಚ್. ಡಿ. ದೇವೇಗೌಡ.—ಎರಡನೇದು, ನಿನ್ನೆ ಅರ್ಥ ಮಂತ್ರಿಗಳು ಬಡ್ಜೆಟ್ಟನ್ನು ಮಂಡವೆ ಮಾಡಿದಾ ರೆ. ಇದರಲ್ಲಿ ಬರಗಾಲದ ಸ್ಥಿತಿ ಬಗ್ಗೆನೂ ತಿಳಿಸಿದ್ದಾರೆ. ಇದರಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದಾರೆ ಅವೆಲ್ಲ ಇವೆ. ಇದರ ಬಗ್ಗೆ ಈಗ ಪ್ರಸ್ತಾಪ ಮಾಡಲು ಇಚ್ಛೆ ಸಂವುದಿಲ್ಲ. ನನಗೆ ಇದರ ಬಗ್ಗೆ ಒಂದು ಫೋನೋಗ್ರಾಂ ಬಂದಿದೆ. ಅದು ಒಬ್ಬ ಹರಿಜನ ಇವನ ಹೆಸರು ಭೀಮ ಎಂದು. ಇವನು ಬಾಲ್ಕಿ ತಾಲ್ಲೂಕಿಗೆ ಸೇರಿದವನು ಹಾಗೂ ಬೀದರು ಜಿಲ್ಲೆಗೆ ಸೇರಿದವನು. ಮೂರು ದಿನಗಳಿಂದ ಊಟವಿಲ್ಲದೆ ನೇಣು ಹಾಕಿಕೊಂಡು ಸತ್ತಿರುವನೆಂದು ವರದಿ ಬಂದಿದೆ. ಇವನ ಹೆಂಡತಿ ಹುಟ್ಟು ಕುರುಡಿಯಂತೆ ಯಾವ ಕೆಲಸವನ್ನೂ ಮಾಡಲಾರದವಳಂತೆ ಮತ್ತು ಇವನಿಗೆ ಎರಡು ಮಕ್ಕಳೂ ಇವೆಯಂತೆ. ಊಟ ವಿಲ್ಲದೆ ಸತ್ತ ಎಂದು ಮಹಜರು ಕೂಡ ಮಾಡಿಯಾಗಿದೆಯಂತೆ. ಇದರ ವಿವರಗಳನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಕಳುಹಿಸಿಕೊಡುತ್ತೇನೆ. ಅವರು ಇದನ್ನು ವಿಚಾರ ಮಾಡುತ್ತಾರೆಂದು ಆಶಿಸುತ್ತೇನೆ.